2748: (3797)

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾದಾಮಿ ತಾಲ್ಲೂಕು ತೋಟದ ಬೆಳೆಗಾರರ ಸಂಸ್ಕರಣಾ ಸಂಘ ಯಾವ ವರ್ಷ ಸ್ಥಾಪಿತಗೊಂಡಿದೆ?

ಆ) ಅಂತಹ ಸಂಸ್ಥೆಗಳಿಗೆ ಸಹಕಾರ ಉತ್ತೇಜನ ಪೂರ್ವಕವಾಗಿ ಯಾವ ಯಾವ ಯೋಜನೆಗಳನ್ನು ಮಂಜೂರಾತಿ ಮಾಡಲಾಗಿದೆ?

ಶ್ರೀ ಡಿ.ಟಿ.ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು):

ಅ) 1993

ಆ) ಇಂತಹ ಸಹಕಾರ ಸಂಸ್ಥೆಗಳಿಗೆ ಉತ್ತೇಜನ ನೀಡಲು ಹಲವಾರು ಕಾರ್ಯಕ್ರಮಗಳಿವೆ.

1. ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ ವತಿಯಿಂದ ಮಾರಾಟ ಮತ್ತು ಸಂಸ್ಕರಣೆ ಮೂಲ ಸೌಲಭ್ಯ ಕಲ್ಪಿಸುವ ಸಾಲದ ನೆರವು ಒದಗಿಸಲಾಗುತ್ತದೆ.

2. ಶೀತಲ ಗೃಹ ಸ್ಥಾಪನೆಗೆ ಷೇರುಧನ ಒದಗಿಸಿ ಪ್ರೋತ್ಸಾಹಿಸಲಾಗುತ್ತದೆ.

3. ರಾಷ್ಟ್ರೀಯ ತೋಟಗಾರಿಕೆ ಮಂಡಳಿಯಿಂದ ಕಡಿಮೆ ಬಡ್ಡಿದರದಲ್ಲಿ ಸಾಲ ಸಹಾಯವನ್ನು ಒದಗಿಸಲಾಗುತ್ತದೆ.

4. ಹಣ್ಣು ತರಕಾರಿಗಳನ್ನು ಕೆಡದಂತೆ ಸಂಗ್ರಹಿಸಿ ಮಾರಾಟ ಮಾಡಲು ಶೇಕಡ 50ರ ರಿಯಾಯ್ತಿ ಒದಗಿಸಿ ಪ್ಲಾಸ್ಟಿಕ್ ಕ್ರೇಟ್‌ಗಳನ್ನು ಒದಗಿಸಲಾಗುತ್ತದೆ.

5. ಇಂತಹ ಸಂಘಗಳ ವತಿಯಿಂದ ತೋಟಗಾರಿಕೆ ಪ್ರಾಮುಖ್ಯ ಪಡೆದ ಸ್ಥಳಗಳಿಗೆ ಭೇಟಿ ನೀಡಲು ರೈತರ ತಂಡಗಳನ್ನು ಪ್ರವಾಸ ಮತ್ತು ಭೇಟಿ ಮಾಡಿಸಿ ಪ್ರೋತ್ಸಾಹಿಸಲಾಗುತ್ತದೆ. ಆದರೆ ಈವರೆಗೆ ಪ್ರಸ್ತಾಪಿತ ಸಂಘದಿಂದ ಇಂತಹ ಯಾವುದೇ ಪ್ರಸ್ತಾವನೆ ಸಲ್ಲಿಕೆಯಾಗಿರುವುದಿಲ್ಲ.

ಧಾರವಾಡದಲ್ಲಿ ಮುಖ್ಯ ವಾಹನ ನಿಲ್ದಾಣ ಪ್ರಾರಂಭಿಸುವುದು.

2749: (3847)

ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ ನಗರ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡದಲ್ಲಿ (ಕೆ.ಎಸ್.ಆರ್.ಟಿ.ಸಿ.ದವರು) ಮುಖ್ಯ ವಾಹನ ನಿಲ್ದಾಣದ ಹೊಸ ಕಟ್ಟಡ ಕಟ್ಟಿಸಿ ಪ್ರಾರಂಭಿಸಲು ಯಾವಾಗ ಅಡಿಗಲ್ಲು ಹಾಕಲಾಯಿತು; (ಪೂರ್ಣ ದಿನಾಂಕದ ವಿವರ ತಿಳಿಸುವುದು)

ಆ) ಧಾರವಾಡ ಮುಖ್ಯ ವಾಹನ ನಿಲ್ದಾಣದ ನಿರ್ಮಾಣ ಕಾರ್ಯವನ್ನು ಇನ್ನು ಪ್ರಾರಂಭಿಸದೆ ಇರುವುದು ನಿಜವೇ?

ಇ) ಯಾವಾಗ ಅದರ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿ ಪೂರೈಸಲಾಗುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು):

ಅ) ಸದರಿ ಅಡಿಗಲ್ಲು ಸಮಾರಂಭವನ್ನು ದಿನಾಂಕ: 20-1-1995ರಂದು ನೆರವೇರಿಸಲಾಗಿರುತ್ತದೆ.

ಆ) ಧಾರವಾಡ ಶಹರದಲ್ಲಿ ನೂತನ ಬಸ್ ನಿಲ್ದಾಣಕ್ಕಾಗಿ ಗುಲಗಂಜಿಕೊಪ್ಪ ಗ್ರಾಮದ ಬ್ಲಾಕ್ ನಂ.81ರ ಕ್ಷೇತ್ರ 7 ಎಕರೆ 7 ಗುಂಟೆ ಜಮೀನನ್ನು ಜಿಲ್ಲಾಧಿಕಾರಿ ಧಾರವಾಡ ಇವರು ದಿನಾಂಕ: 13-11-1994ರಂದು ಮಂಜೂರಾತಿ ಮಾಡಿರುತ್ತಾರೆ. ಈ ಜಮೀನು ಕಾರಾಗೃಹ ಇಲಾಖೆಗೆ (ಬಾಲಾಪರಾಧ ಶಾಖೆ) ಸೇರಿದುದಾಗಿದ್ದುದರಿಂದ ಬಸ್ ನಿಲ್ದಾಣ ನಿರ್ಮಾಣಕ್ಕಾಗಿ ನೀಡಿದ ಮಂಜೂರಾತಿಯನ್ನು ಧಾರವಾಡ ಜಿಲ್ಲೆ ಜಿಲ್ಲಾಧಿಕಾರಿಗಳು ದಿನಾಂಕ: 25-3-98ರ ಆದೇಶದಲ್ಲಿ ರದ್ದುಗೊಳಿಸಿದ್ದಾರೆ. ಆದ್ದರಿಂದ ಧಾರವಾಡ ಮುಖ್ಯ ವಾಹನ ನಿಲ್ದಾಣದ ಕಾರ್ಯ ಪ್ರಾರಂಭವಾಗಿರುವುದಿಲ್ಲ.

ಇ) ಈ ಹಿಂದೆ ಮಂಜೂರಾಗಿದ್ದ ಬಾಲಾಪರಾಧಿ ಶಾಲೆಯ ಜಾಗವು ಬಸ್ ನಿಲ್ದಾಣ ನಿರ್ಮಿಸಲು ಅತ್ಯಂತ ಸೂಕ್ತವಾಗಿದ್ದು ಸದರಿ ಜಾಗವನ್ನು ಬಸ್ ನಿಲ್ದಾಣ ನಿರ್ಮಿಸಲು ಸಂಸ್ಥೆಗೇ ಒದಗಿಸಲು ಕ್ರಮ ಕೈಗೊಂಡು ನಿಲ್ದಾಣವನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಬಗರ್ ಹುಕುಂ ಸಾಗುವಳಿ

2751: (3728)